ಆರ್.ಎ.ನಂ.7/2023

ಪಿ.ಡಬ್ಲ್ಯೂ.01

**<u>ಸಾಕ್ಷಿಗೆ ಇಂದು ದಿನಾಂಕ 06-12-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲ: ಶ್ರೀ ಆಯ ಎಚ ಎ ವಕೀಲರಿಂದ ಪರವಾಗಿ</u>**

ನಾನು ಸ್ವಂತ ವಾಹನವನ್ನು ಹೊಂದಿದ್ದೇವೆ ಎಂದರೆ ಸರಿಯಲ್ಲ ನನಾು ಚಾಲಕನು ಆಗಿ ಕೆಲಸ ಮಾಡುತ್ತೇನೆ. ನನ್ನನ್ನು ಚಾಲಕ ಅಂತಾ ಯಾರಾದಾರೂ ಬಾಡಿಗಾಗಿ ಕರೆದರೆ ಮಾತ್ರ ಅವರ ವಾಹನಗಳಲ್ಲಿ ಚಾಲಕನ್ನಾಗಿ ಕೆಲಸಕ್ಕೆ ಹೋಗುತ್ತೇನೆ ಇಲ್ಲ ಅಂದರೆ ಇಲ್ಲ. ಒಂದು ದಿನಕ್ಕೆ ಚಾಲಕರನಿಗೆ ರೂ.500/- ಗಳ ಸಂಬಳ ವನ್ನು ನೀಡುತ್ತಾರೆ ಎಂದರೆ ಸರಿಯಲ್ಲ. ಒಬ್ಬರು 200/- ಮತ್ತು 300/-, ಕೆಲಮೊಬ್ಬರು 400 ರೂ ಸಂಬಳ ನೀಡುತ್ತಾರೆ. ನಮ್ಮ ಮನೆತನ ಆಸ್ತಿಗಳಲ್ಲಿ ಪಾಲು ವಾಟ್ನಿ ಮಾಡಿಕೋಂಡ ಪ್ರಕಾರ ನನ್ನ ಪಾಲಿಗೆ ಎರಡು ಆಸ್ತಿಗಳು ಬಂದಿರುವವರು ಎಂದರೆ ಸರಿ. ಅವುಗಳೆಂದರೆ CTS no.3573 ಹಾಗೂ 3575. ನಾನು CTS no.3573 ರ ಆಸ್ತಿಯಲ್ಲಿ ವಾಸವಾಗಿರುವೆನು. CTS no.3575 ರ ಆಸ್ತಿಯನ್ನು ನಾನು ಬಾಡಿಗಾಗಿ ನೀಡಿದ್ದೆನೆ ಎಂರದೆ ಸರಿಯಲ್ಲ. ಈ ಆಸ್ತಿಯಲ್ಲಿ ನನ್ನ ತಮ್ಮನಾದ ವಿಶ್ವನಾಥನ ಹೆಂಡತಿ ಮತ್ತು ಮಕಕಳು ವಾಸವಾಗಿರುವವರು. CTS no.3575 ರ ಆಸ್ತಿ ಮುಖ್ಯ ರಸ್ತೆಗೆ ಹೊಂದಿಕೊಂಡು ಇರುವುದು ಎಂದರೆ ಸರಿ. ಈ ಆಸ್ತಿಯನ್ನು ನಾನು ಬಾಡಿಗಾಗಿ ನೀಡಿದ್ದು, ಇದರಿಂದ ಪ್ರತಿ ತಿಂಗಳು ರೂ 15,000/- ರೂ. ಗಳ ಬಾಡಿಗೆ ಪಡೆಯುತ್ತಿದ್ದೆನೆ ಎಂದರೆ ಸರಿಯಲ್ಲ. ಈ ಆಸ್ತಿಯಿಂದ ನಾನು ಯಾವುದೇ ಬಾಡಿಗೆಯನ್ನು ಪಡೆಯುತ್ತಿಲ್ಲ.

ನನಗೆ ಒಬ್ಬ ಮಗನು ಇರುವನು ಎಂದರೆ ಸರಿ. ಇತ ಶಾಲೆಗೆ ಹೋಗುತ್ತಿರುವನು. ಈ ಮೇಲ್ಮನವಿ ಸಲ್ಲಿಸಲು ವಿಳಂಬಕ್ಕೆ ಕಾರಣ ಎಂದರೆ ನನ್ನ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇರುವುದಿಲ್ಲ ಎಂದು ಹೇಳಿ ಬರೆಸಿರುವೆನು. ಈ ಮೇಲ್ಮನವಿ ಸಲ್ಲಿಸಲು ನ್ಯಾಯಾಲಯಕ್ಕೆ ಶುಲ್ಕು ಎಷ್ಟು ಹಣ ಸಂದಾಯ ಮಾಡಿರುವೆನು ನನಗೆ ಹೇಳಲು ಆಗುವುದಿಲ್ಲ. ಆದರೆ ವಕೀಲರಿಗೆ ರೂ.20 ಸಾವಿರ ರೂ ಫೀಜನ್ನು ಬೇರೆಯವರ ಕಡೆಯಿಂದ ಸಾಲ ಮಾಡಿ ನೀಡಿರುವೆನು. ಈ ಮೇಲ್ಮನವಿ ಸಲ್ಲಿಸಲು ನ್ಯಾಯಾಲಯಕ್ಕೆ ಕೇವಲ 50/- ರೂ ಶುಲ್ಕು

ಸಂದಾಯ ಮಾಡಿರುವೆನು. ಈ 50/- ರೂ ಸಂದಾಯ ಮಾಡಿ ಮೇಲ್ಮನವಿ ಸಲ್ಲಿಸಲು ನನಗೆ ಯಾವಾಗಲೂ ಅನುಕೂಲ ಇತ್ತು ಎಂದರೆ ಸಾಕ್ಷಿ ಮುಂದುವರೆದು ನನಗೆ ಇತದ ಬಗ್ಗೆ ಅಷ್ಟೊಂದು ತಿಳುವಳಿಕೆ ಇರುವುದಿಲ್ಲ ಎಂದು ಹೇಳುತ್ತಾರೆ. ನಿಪಿ-1 ರ ಪ್ರಕಾರ ನಾನು ಈ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಮುಧೋಳದ ಸಿವಿಲ್ ನ್ಯಾಯಾಲಯದಲ್ಲಿ 226/2022 ರ ದಾವೆ ದಾಖಲು ಮಾಡಿದ ಬಗ್ಗೆ ಅಷ್ಟೂಂದು ಮಾಹಿತಿ ಇರುವುದಿಲ್ಲ ನಿಪಿ-1 ರ ದಾಖಲಾತಿ ಈ ದಾವಾ ಆಸ್ತಿಗೆ ಸಂಬಂಧಪಟ್ಟಿರುವುದು ಎಂದರೆ ಸಾಕಿ ತನಗೆ ಅಷ್ಟೊಂದು ಮಾಹಿತಿ ಇರುವುದಿಲ್ಲ ಎಂದು ಹೇಳುತ್ತಾರೆ . ಆ ಸಮಯದಲ್ಲಿ ನ್ಯಾಯಾಲಯದ ಶುಲ್ಕ ಸರಾದಯ ಮಾಡಿದ್ದು, ವಕಿಲರ ಫೀಜ ನ್ನು ಸಂದಾಂದು ಮಾಡಿರುವೀರಿ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ ಈ ಮೇಲ್ಮನವಿ ಸಲ್ಲಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮನೆ ಬಾಡಿಗೆಯಿಂದ ಹಜಾಗೂ ನಾನು ಚಾಲಕನನಾಗಿ ಕತರ್ವ್ಯ ನಿರ್ವಹಿಸಿ ಒಟ್ಟು 25,000/- ಹಣ ಸಂಪಾದನೆ ಮಾಡುತ್ತೇನೆ ಎಂದರೆ ಸರಿಯಲ್ಲ. ಈ ಅಸಲು ದಾವಾ ನಂ.249/2015 ರ ದಾವೆಯ ಆದೇಶದ ವಿರುದ್ದ ಕಾಲ ಪರಿಮಿತಿ ಅವಧಿಯೊಳಗಾಗಿ ನನಗೆ ಯಾವುದೇ ಆರ್ಥಿಕ ತೂಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರಕವಾಗಿ ಈ ಮೇಲ್ಮನವಿ ಸಲ್ಲಿಸಲು 5 ವರ್ಷ 6 ತಿಂಗಳಗಿಂತ ಹೆಚ್ಚಿನ ವಿಳಂಬ ಆಗಿರುವುದು ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ನೀಡುವ ಸಲುವಾಗಿ ಈ ಮೇಲ್ಮನವಿ ಸಲ್ಲಿಸಿದ್ದೆ ಎಂದರೆಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ., ಮುಧೋಳ